# ಮಂಗಳೂರು ವಿಶ್ವವಿದ್ಯಾನಿಲಯ

(Accredited by NAAC with 'A' Grade)

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ – 574 199

ಸಂಖ್ಯೆ: ಮಂವಿವಿ/ಎಸ್‌ಸಿಟಿಘಟಕ/ಸ್ಥಾ.ಸ./ಸಿ.ಆರ್.1/2018-19/SCT1

ದಿನಾಂಕ: 30.04.2020

## ಅಧಿಸೂಚನೆ

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ/ಪಂಗಡ ಘಟಕದ ವತಿಯಿಂದ ನೀಡಲಾಗುವ ಸೌಲಭ್ಯಗಳನ್ನು ಪರಿಷ್ಕರಿಸಿರುವ ಬಗ್ಗೆ.

**ಉಲ್ಲೇಖ:** 1. ಸ್ಥಾಯಿ ಸಮಿತಿ ನಿರ್ಣಯ ದಿನಾಂಕ: 12.12.2019
2. ಸಿಂಡಿಕೇಟ್ ಸಭೆ ಅನುಮೋದನೆ ದಿನಾಂಕ: 24.02.2020
3. ಮಾನ್ಯಕುಲಪತಿಯವರ ಅನುಮೋದನೆ ದಿನಾಂಕ: 21.03.2020.

**********

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡ ಸ್ನಾತಕೋತ್ತರ ವಿದ್ಯಾರ್ಥಿಗಳ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳನ್ನು ಪ್ರಸ್ತುತ ಸ್ಥಿತಿಗೆ ಅನುಗುಣವಾಗಿ ಪರಿಷ್ಕರಿಸುವ ಸಲುವಾಗಿ ದಿನಾಂಕ: 12.12.2019 ರಂದು ನಡೆದ ಪರಿಶಿಷ್ಟ ಜಾತಿ/ಪಂಗಡಗಳ ಸ್ಥಾಯಿ ಸಮಿತಿ ಸಭೆಯಲ್ಲಿ ಕೈ ಗೊಂಡ ನಿರ್ಣಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಲಾಗಿದ್ದು ಈ ಕೆಳಗೆ ಪರಿಷ್ಕೃತಗೊಳಸಿದ ಆರ್ಥಿಕ ಸೌಲಭ್ಯಗಳನ್ನು ದಿನಾಂಕ: 01.04.2020ರಿಂದ ಜಾರಿಗೆ ಬರುವಂತೆ ಈ ಮೂಲಕ ಅಧಿಸೂಚಿಸಲಾಗಿದೆ.

| ಸೌಲಭ್ಯದ ವಿವರ | ಪ್ರಸ್ತುತ ಇರುವ ಸೌಲಭ್ಯ | ಪರಿಷ್ಕೃತ ಸೌಲಭ್ಯ |
|---|---|---|
| ಸಂಶೋಧನಾ ಪ್ರಗತಿ ಪರಿಶೀಲನಾ ವರದಿ ನೀಡುವ ಬಗ್ಗೆ | ಸಂಶೋಧನಾ ಪ್ರಗತಿ ವರದಿಯನ್ನು 3+1+1 ಅವಧಿಗೆ ನೀಡುವುದು | ಸಂಶೋಧನಾ ಪ್ರಗತಿ ವರದಿಯನ್ನು 3+2 ಅವಧಿಗೆ ನೀಡುವುದು |
| ಸಂಶೋಧನಾ ವಾರ್ಷಿಕ ಸಾದಿಲ್ವಾರು ಮೊತ್ತ | ಕಲಾ/ವಾಣಿಜ್ಯ/ಶಿಕ್ಷಣ ನಿಕಾಯಕ್ಕೆ – ರೂ 12,000/-<br>ವಿಜ್ಞಾನ ನಿಕಾಯಕ್ಕೆ – ರೂ.15,000/- | ಕಲಾ/ವಾಣಿಜ್ಯ/ಶಿಕ್ಷಣ ನಿಕಾಯಕ್ಕೆ – ರೂ 15,000/-<br>ವಿಜ್ಞಾನ ನಿಕಾಯಕ್ಕೆ – ರೂ.17,000/- |
| ಸಂಶೋಧನಾ ಪ್ರಬಂಧ ತಯಾರಿ ಖರ್ಚು | ರೂ 10,000/- | **ವಾರ್ಷಿಕ ವರಮಾನದ :-**<br>ರೂ.2.5 ಲಕ್ಷಕ್ಕೆ ಮಿತಿಯೊಳಗೆ – ರೂ 15,000/-<br>ರೂ.2.5 ಲಕ್ಷದಿಂದ 10.00ಲಕ್ಷ – ರೂ 10,000/- |
| ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ನಡೆಯುವ ಸಮ್ಮೇಳನ/ವಿಚಾರ ಸಂಕಿರಣದಲ್ಲಿ ಪ್ರಬಂಧ ಮೌಖಿಕ / ಪತ್ರಿಕಾ ಮಂಡಿಸಲು ಸಹಾಯಧನ | ಮಿತಿ ಇರುವುದಿಲ್ಲ | ಸಂಶೋಧನಾ ಅವಧಿಯಲ್ಲಿ ಆರಂಭದ 2 ವರ್ಷಗಳನ್ನು ಪೂರೈಸಿದ ನಂತರ ಒಂದು ಬಾರಿ ಅನ್ವಯವಾಗುವಂತೆ ನೋಂದಣಿ ಶುಲ್ಕ + ವೀಸಾ ವೆಚ್ಚ+ಎಕಾನಮಿ ವಾಯುಯಾನ ದರ + ದಿನಭತ್ಯೆ ಮೊತ್ತ (Per diem Allowance of the Respective Country ) ಅಥವಾ ವಾಸ್ತವಿಕ ವೆಚ್ಚ ಯಾವುದು ಕಡಿಮೆ ಅದನ್ನು ಪರಿಗಣಿಸುವುದು. ಸಹಾಯಧನ ಮಂಜೂರು ಮಾಡುವುದು<br>(**ಷರತ್ತುಗಳು ಅನ್ವಯಿಸುತ್ತದೆ) |
| ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳಿಗೆ ಸ್ವದೇಶದಲ್ಲಿ ನಡೆಯುವ ಸಮ್ಮೇಳನ/ವಿಚಾರ ಸಂಕಿರಣದಲ್ಲಿ ಪ್ರಬಂಧ ಮೌಖಿಕ / ಪತ್ರಿಕಾ ಮಂಡಿಸಲು ಸಹಾಯಧನ | ಮಿತಿ ಇರುವುದಿಲ್ಲ | ಸಂಶೋಧನಾ ಅವಧಿಯಲ್ಲಿ ವರ್ಷಕೊಂದು ಬಾರಿ ಗರಿಷ್ಟ 5 ವರ್ಷಗಳಿಗೆ 3 ಟೈರ್ ಹವಾನಿಯಂತ್ರಿತ ದರ್ಜೆ/ಸ್ಲೀಪರ್ ದರ್ಜೆ ರೈಲು ದರ+ನೋಂದಣಿ ಶುಲ್ಕ ಹಾಗೂ ದಿನಭತ್ಯೆ. (ವಿವಿಧ ನಗರಗಳ ವರ್ಗೀಕರಣದ ಆಧಾರದ ಮೇಲೆ ಸಹಾಯಕ ಪ್ರಾಧ್ಯಾಪಕರ ಕನಿಷ್ಠ ವೇತನ ಶ್ರೇಣಿಗೆ ಅನುಗುಣವಾಗಿ ನೀಡುವುದು.) ದರವನ್ನು ನಿಗದಿಪಡಿಸುವುದು<br>**(**ಷರತ್ತುಗಳು ಅನ್ವಯಿಸುತ್ತದೆ)** |
| ಸಂಶೋಧನಾ ವಿಧ್ಯಾರ್ಥಿಗಳ ಶುಲ್ಕ ಮರುಭರಣ | ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾತ್ರ ನೀಡಲಾಗುವುದು | ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳು ಉದ್ಯೋಗಸ್ಥರಾಗಿದ್ದಲ್ಲಿ ಅನ್ವಯವಾಗುವುದಿಲ್ಲ. ಕುಟುಂಬದ ವಾರ್ಷಿಕ ವರಮಾನದ ಮಿತಿ 2.5 ಲಕ್ಷ ಮಿತಿಯೊಳಗೆ ಸಂಪೂರ್ಣ ಮರುಭರಣೆ ಹಾಗೂ ಕುಟುಂಬದ ವಾರ್ಷಿಕ ವರಮಾನದ ಮಿತಿ 2.5 ಲಕ್ಷ – 10.00ಲಕ್ಷ ಮಿತಿಯೊಳಗೆ 50% ಮರುಭರಣೆ ಮಾಡುವುದು. |
| ಶೈಕ್ಷಣಿಕ ಪ್ರವಾಸ | ಮಿತಿ ಇರುವುದಿಲ್ಲ | ದ್ವಿತೀಯ ವರ್ಷದ ಪಠ್ಯಕ್ರಮದಲ್ಲಿ ಶೈಕ್ಷಣಿಕ ಪ್ರವಾಸ ಕಡ್ಡಾಯವಾಗಿ ಇದ್ದಲ್ಲಿ ವ್ಯಾಸಂಗದ ಅವಧಿಯಲ್ಲಿ ಒಂದು ಬಾರಿ ಗರಿಷ್ಠ ರೂ 5,000/- ಸಹಾಯಧನ (ಕುಟುಂಬದ ವಾರ್ಷಿಕ ವರಮಾನದ ಮಿತಿ 2.50 ಲಕ್ಷಕ್ಕೆ ನಿಗದಿಪಡಿಸಲಾಗಿದೆ.) |

ಮುಂದುವರಿಯುವುದು..........

| | | |
|---|---|---|
| ಪ್ರೌಢ ಪ್ರಬಂಧ (Dissertation Work) | ರೂ 5,000/- | ಪಠ್ಯಕ್ರಮದಲ್ಲಿ ಕಡ್ಡಾಯವಾಗಿ ಇದ್ದಲ್ಲಿ ದ್ವಿತೀಯ ವರ್ಷದಲ್ಲಿ ಗರಿಷ್ಠ ರೂ 6,000/- (ಕುಟುಂಬದ ವಾರ್ಷಿಕ ವರಮಾನದ ಮಿತಿ 2.50 ಲಕ್ಷಕ್ಕೆ ನಿಗದಿಪಡಿಸಲಾಗಿದೆ.) |
| ಇಂಟರ್ನ್ ಶಿಪ್ | ಸೌಲಭ್ಯ ಇರುವುದಿಲ್ಲ | ಪಠ್ಯಕ್ರಮದಲ್ಲಿ ಕಡ್ಡಾಯವಾಗಿ ಇದ್ದಲ್ಲಿ ವ್ಯಾಸಂಗದ ಅವಧಿಯ ಪ್ರಥಮ ವರ್ಷದಲ್ಲಿ ಒಂದು ಬಾರಿ ಗರಿಷ್ಠ ರೂ 3,000/- ಸಹಾಯಧನ<br>ಕುಟುಂಬದ ವಾರ್ಷಿಕ ವರಮಾನದ ಮಿತಿ 2.50 ಲಕ್ಷಕ್ಕೆ ನಿಗದಿಪಡಿಸಲಾಗಿದೆ. |
| ಎಂ.ಪಿ.ಎಡ್./ಬಿ.ಪಿ.ಎಡ್ ಸ್ಪೋರ್ಟ್ಸ್‌ಕಿಟ್ | ರೂ 4,000/- | ವ್ಯಾಸಂಗದ ಅವಧಿಯ ಪ್ರಥಮ ವರ್ಷದಲ್ಲಿ ಒಂದು ಬಾರಿ ರೂ 5,000/- (ಕುಟುಂಬದ ವಾರ್ಷಿಕ ವರಮಾನದ ಮಿತಿ 2.50 ಲಕ್ಷಕ್ಕೆ ನಿಗದಿಪಡಿಸಲಾಗಿದೆ.) |

ಈ ಸೌಲಭ್ಯಗಳನ್ನು ಪಡೆಯುವ ವಿಧಾನ ಮತ್ತು ಬೇಕಾಗಿರುವ ಅರ್ಹತೆಯ ಬಗ್ಗೆ ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದ್ದು ವಿದ್ಯಾರ್ಥಿಗಳು ಈ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಸೌಲಭ್ಯಗಾಗಿ ಅರ್ಜಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಕರಡು ಪತ್ರಕ್ಕೆ ಕುಲಸಚಿವರ ಅನುಮೋದನೆ ಪಡೆಯಲಾಗಿದೆ.

20/1/2020

ಕುಲಸಚಿವರ ಪರವಾಗಿ

ರಿಗೆ,

1. ಅಧ್ಯಕ್ಷರು/ಸಂಯೋಜಕರು ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಹಾಗೂ ನಿರ್ದೇಶಕರು/ಸಂಯೋಜಕರು, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ,ತೊರೆನೂರು, ಸೋಮವಾರ ಪೇಟೆ ತಾಲೂಕು, ಕೊಡಗು
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು/ಎಫ್.ಎಂ.ಕೆ.ಎಂ.ಸಿ. ಕಾಲೇಜು, ಮಡಿಕೇರಿ

ಪ್ರತಿ:

1. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2. ಸಂಯೋಜಕರು, ವೆಬ್ ಪೋರ್ಟಲ್, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ಸದರಿ ಅಧಿಸೂಚನೆ ಹಾಗೂ ಅರ್ಜಿಯ ನಮೂನೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ